ದಿನಾಂಕಃ **09-05-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಬಿ ಎನ್ ಎನ್ ವಕೀಲರಿಂದಃ

ನಾನು ಹಲವಾರು ಪ್ರಕರಣಗಳನ್ನು Negotiable instrument Act ಕೆಳಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಇದೇ ನ್ಯಾಯಾಲಯದಲ್ಲಿ ನಾನು ರಾಮಯ್ಯ ರವರ ವಿರುದ್ಧ ಕಲಂ. 138 Negotiable instrument Act ಕೆಳಗಡೆ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನಲ್ಲಿರುವ ಆರೋಪಿ ನನಗೆ ಪರಿಚಯ ಇದಾರೆ ಎಂದರೆ ಸರಿ. ನನಗೆ ನನ್ನ ಕುಟುಂಬದಲ್ಲಿ ಕಷ್ಟ ಇರುವ ಕಾರಣದಿಂದ ನಾನು ಆರೋಪಿಯಿಂದ ಸಾಲವನ್ನು ಕೇಳಿದಾಗ ಆರೋಪಿಯವರು ನನಗೆ ನಿಪಿ-1 ನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ಹಣವನ್ನು ಕೊಟ್ಟಿರುವುದಕ್ಕೆ ದಾಖಲಾತಿ ಏನಾದರೂ ಇದೆಯಾ ಎಂದರೆ ಸಾಕ್ಷಿ ಚೆಕ್ ನ್ನು ಕೊಟ್ಟಿರುತ್ತಾರೆ. ಚೆಕ್ ನ್ನು ಹೊರತು ಪಡಿಸಿ ಬೇರೆ ಏನಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ಚೆಕ್ ನ್ನು ಬಿಟ್ಟು ಬೇರೆ ದಾಖಲಾತಿಗಳನ್ನು ಆರೋಪಿಯವರು ನನಗೆ ಬರೆದುಕೊಟ್ಟಿಲ್ಲ. ನಾನು ನಿಪಿ-1 ರ ಮೇರೆಗೆ ಎಲ್ಲಾ ದಾಖಲಾತಿಗಳನ್ನು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಶ್ರೀ ಬಿ ಎನ್ ಎನ್ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.